ದಿನಾಂಕಃ 02.11.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎನ್ ಡಿ ವಕೀಲರಿಂದಃ ಆರೋಪಿತರ ಪರವಾಗಿಃ</u>

13. ನಮ್ಮ ಊರಿನಿಂದ ಕಡೂರು ಪೊಲೀಸ್ ಠಾಣೆಗೆ 18 ಕಿಲೋ ಮೀಟರ್ ದೂರವಾಗುತ್ತದೆ. ನಮ್ಮ ಊರಿನಿಂದ ಕಡೂರು ಪೊಲೀಸ್ ಠಾಣೆಗೆ ಬಸ್ಸಿನಲ್ಲಿ ಹೋದರೆ ಮುಕ್ಕಾಲರಿಂದ 1 ಗಂಟೆ ಸಮಯ ತಗುಲುತ್ತದೆ, ಬೈಕಿನಲ್ಲಿ ಹೋದರೆ ಅರ್ಧ ಗಂಟೆಯಲ್ಲಿ ಹೋಗಬಹುದು. ನಮ್ಮ ಊರಿನಿಂದ ದೊಡ್ಡಗರ್ಜೆ, ಮಾದಾಪುರ, ಮಠ, ಬಿಳುವಾರ, ಚಿಕ್ಕಬಾಸೂರು, ಕರ್ಲಾಪುರ, ಮಲ್ಲೇಶ್ವರ, ಕಡೂರು ಮಾರ್ಗದಲ್ಲಿ ಕಡೂರು ಪೊಲೀಸ್ ಠಾಣೆಗೆ ಹೋದೆನು.

14. ಆ ದಿನ ಕಡೂರು ಪೊಲೀಸ್ ಠಾಣೆಯಿಂದ ಫೋನ್ ಮಾಡಿದ್ದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ನಿಮ್ಮ ಫೋನ್ ನಂಬರ್ ಸದರಿ ಪೊಲೀಸರ ಬಳಿ ಹೇಗೆ ಲಭ್ಯವಿತ್ತು ಎಂದರೆ ಸಾಕ್ಷಿ ಫ್ರಾಸಾ.1 ರವರು ಕೊಟ್ಟಿರಬಹುದು ಎನ್ನುತ್ತಾರೆ. ಪೊಲೀಸರು ನಿಮ್ಮ ಸಂಬಂಧಿಕರನ್ನು ಕರೆಸಿ ಎಂದು ಹೇಳಿದ್ದರಿಂದ ಫ್ರಾಸಾ.1 ರವರು ನಿಮ್ಮ ಫೋನ್ ನಂಬರನ್ನು ಕೊಟ್ಟಿರಬಹುದು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

15. ನಮ್ಮ ಊರಿನಿಂದ ನಾನು ಒಬ್ಬನೇ ಆ ದಿನ ಬೈಕಿನಲ್ಲಿ ಕಡೂರು ಪೊಲೀಸ್ ಠಾಣೆಗೆ ಹೋಗಿದ್ದೆನು. ನೀವು ಠಾಣೆಗೆ ಹೋಗುತ್ತಿದ್ದಂತೆ ಅಲ್ಲಿ ಮು.ಮಾ.10 ಮೊಬೈಲನ್ನು ನೋಡಿದ್ದೀರಿ ಎಂದರೆ ಸರಿ. ಠಾಣೆಯಲ್ಲಿ ಚಾಸಾ.13 ರವರು ಇದ್ದುದ್ದಾಗಿ ಹೇಳಿದ್ದೀರಿ ನಿಮಗೆ ಮೊದಲೇ ಅವರ ಪರಿಚಯವಿತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚಾಸಾ.13 ಶ್ರೀಧರ್ ರವರು ಮೃತನ

ಸಂಬಂಧಿಕರು ಎಂದರೆ ಸರಿಯಲ್ಲ ಆದರೆ ಆತನ ಊರಿನವರು.

16. ಪೊಲೀಸ್ ಠಾಣೆಯಲ್ಲಿ ಒಟ್ಟು ನಿಮ್ಮ ಎಷ್ಟು ಸಹಿಗಳನ್ನು ಪಡೆದುಕೊಳ್ಳಲಾಯಿತು ಎಂದರೆ ಸಾಕ್ಷಿ ಮೊಬೈಲ್ ಮೇಲೆ, ಬಟ್ಟೆಗಳ ಮೇಲೆ ಮತ್ತು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಬರವಣಿಗೆ ಮಾಡಲಾಗಿತ್ತೇ ಎಂದರೆ ಸಾಕ್ಷಿ ಟೈಪ್ ಮಾಡಲಾಗಿತ್ತು ಆದರೆ ನಾನು ಅದನ್ನು ಓದಿಲ್ಲ ಎನ್ನುತ್ತಾರೆ.

17. ಈ ಪ್ರಕರಣ ದಾಖಲಾಗುವ ಮೊದಲು ಎಷ್ಟು ಬಾರಿ ಮತ್ತು ದಾಖಲಾದ ಮೇಲೆ ಎಷ್ಟು ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ಮಹಜರ್ ಮಾಡಿದ ದಿನವೇ ಮೊದಲ ಬಾರಿಗೆ ಠಾಣೆಗೆ ಹೋಗಿದ್ದೇನೆ ಎನ್ನುತ್ತಾರೆ. ನಾನು ಯಾವುದೇ ಗ್ರಾಮ ಪಂಚಾಯ್ತಿಯ ಅಧ್ಯಕ್ಷನಲ್ಲ. ನಿಪಿ.17 ರಿಂದ ನಿಪಿ.19 ಫೋಟೋಗಳನ್ನು ತೆಗೆದುಕೊಂಡಿದ್ದಾಗಿ ಹೇಳಿದ್ದೀರಿ ಅವುಗಳನ್ನು ಯಾರು ಯಾವ ಕ್ಯಾಮೆರಾದಿಂದ ತೆಗೆದರು ಎಂದರೆ ಸಾಕ್ಷಿ ಪೊಲೀಸರು ತೆಗೆದುಕೊಂಡಿದ್ದಾರೆ ಆದರೆ ಯಾವ ಕ್ಯಾಮೆರಾದಿಂದ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

18. ಮು.ಮಾ.11 ಮತ್ತು ಮು.ಮಾ.12 ಎಂದು ಗುರುತಿಸಲ್ಪಟ್ಟಿರುವ ಶರ್ಟು ಮತ್ತು ಜರ್ಕಿನ್ 1 ನೇ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಸದರಿ ಬಟ್ಟೆಗಳನ್ನು ನೀವೇ ಹಾಜರುಪಡಿಸಿ ಅವುಗಳನ್ನು 1 ನೇ ಆರೋಪಿ ಪೊಲೀಸರಿಗೆ ಹಾಜರುಪಡಿಸಿದ್ದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮು.ಮಾ.11 ಶರ್ಟಿನಲ್ಲಿ ಎಷ್ಟು ಬಟನ್ ಗಳಿದ್ದವು ಎಂದರೆ ಸಾಕ್ಷಿ ನಾನು ಅವುಗಳನ್ನು ಎಣಿಸಿಲ್ಲ ಎನ್ನುತ್ತಾರೆ. ಮು.ಮಾ.12 ಜರ್ಕಿನ್

ನಲ್ಲಿ ಎಷ್ಟು ಪಾಕೆಟ್ ಗಳು ಇದ್ದವು ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿಲ್ಲ ಆದರೆ ಅದರ ಬಣ್ಣವನ್ನು ಗಮನಿಸಿದ್ದೇನೆ ಎನ್ನುತ್ತಾರೆ.

19. ನೀವು ಹೇಳಿದಂತೆ ಮು.ಮಾ.11 ಮತ್ತು ಮು.ಮಾ.12 ಅನ್ನು ಪೊಲೀಸರು ನಿಮ್ಮ ಸಮಕ್ಷಮ 1 ನೇ ಆರೋಪಿಯಿಂದ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.16 ನೋಟೀಸಿಗೆ ಸಹಿ ಮಾಡಿದ್ದಾಗಿ ಹೇಳಿದ್ದೀರಿ ಅದರಲ್ಲಿ ಏನು ಬರೆದಿತ್ತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಾನು ಓದಿಲ್ಲ ಎನ್ನುತ್ತಾರೆ. ನಿಪಿ.15 ಪಂಚನಾಮೆಗೆ ಸಹಿ ಮಾಡಿದ್ದಾಗಿ ಹೇಳಿದ್ದೀರಿ ಅದರಲ್ಲಿ ಏನು ಬರೆದಿತ್ತು ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಾನು ಓದಿಲ್ಲ ಎನ್ನುತ್ತಾರೆ.

20. 1 ನೇ ಆರೋಪಿ ಹಾಜರುಪಡಿಸಿದ ಮೊಬೈಲು ಮು.ಮಾ.10 ಎಂದು ಗುರುತಿಸಲ್ಪಟ್ಟಿರುವ ಮೊಬೈಲೇ ಎಂದು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.10 ಎಂದು ಗುರುತಿಸಲ್ಪಟ್ಟಿರುವ ಮೊಬೈಲ್ ನಂತಹ ಮೊಬೈಲುಗಳು ಅಂಗಡಿಯಲ್ಲಿ ದೊರಕುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿದು ಆ ದಿನ ಠಾಣೆಯಲ್ಲಿ 1 ನೇ ಆರೋಪಿ ಹಾಜರುಪಡಿಸಿದ ಮೊಬೈಲ್ ಮು.ಮಾ.10 ಎಂದು ಗುರುತಿಸಲ್ಪಟ್ಟಿರುವ ಮೊಬೈಲೇ ಎಂದು ನುಡಿದಿರುತ್ತಾರೆ.

21. ಪ್ರಾಸಾ.1 ರವರ ಕುಟುಂಬಕ್ಕೆ ಸಂಬಂಧಿಸಿದ ಮು.ಮಾ.10 ಮೊಬೈಲನ್ನು ಹಾಜರುಪಡಿಸಿ ಅದನ್ನು 1 ನೇ ಆರೋಪಿಯೇ ಪೊಲೀಸರಿಗೆ ಹಾಜರುಪಡಿಸಿದ್ದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸಾಕ್ಷಿ ಇದೇ ಮೊದಲ ಬಾರಿಗೆ ಸಾಕ್ಷ್ಯ

ನುಡಿಯುತ್ತಿದ್ದೇನೆ ಎನ್ನುತ್ತಾರೆ. ನಿಪಿ.17 ರಿಂದ ನಿಪಿ.19 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

22. ಮು.ಮಾ.10 ರಿಂದ ಮು.ಮಾ.12 ಅನ್ನು ನಿಮ್ಮ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಗಿಲ್ಲ ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

23. ಆರೋಪಿತರನ್ನು ಕುರಿತು ಪೊಲೀಸರು ಪ್ರಕಾಶನ ಸಾವಿನ ಬಗ್ಗೆ ವಿಚಾರಿಸಿದ್ದಾಗಿ ಆಗ 1 ನೇ ಆರೋಪಿ ದಿನಾಂಕ 14.07.2021 ರಂದು ಬಸವೇಶ್ವರ ಸರ್ಕಲ್ ನಲ್ಲಿದ್ದ ಪ್ರಕಾಶ್ ರವರ ಆಟೋವನ್ನು ನಂಜಪ್ಪನಹಳ್ಳಿಗೆ ಹೋಗಲು ಬಾಡಿಗೆಗೆ ಆರೋಪಿತರು ಮಾತನಾಡಿದ್ದಾಗಿ ಮತ್ತು ಅದರಂತೆ ಪ್ರಕಾಶ್ ರವರು ಅದಕ್ಕೆ ಒಪ್ಪಿಕೊಂಡಿದ್ದಾಗಿ ನಂತರ ಅಲ್ಲಿಂದ ಹೊರಟಿದ್ದಾಗಿ ಮಧ್ಯದಲ್ಲಿ ಮಧ್ಯವನ್ನು ಖರೀದಿಸಿ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಟೋವನ್ನು ನಿಲ್ಲಿಸಿ ಅಲ್ಲಿ ಆರೋಪಿತರು ಮಧ್ಯಪಾನವನ್ನು ಮಾಡಿದ್ದಾಗಿ ಮತ್ತು ಅವರು ಪ್ರಕಾಶನಿಗೂ ಸಹ ಮಧ್ಯವನ್ನು ಕುಡಿಸಿದ್ದಾಗಿ ನಂತರ ಪ್ರಕಾಶನ ಕುತ್ತಿಗೆಯನ್ನು ಹಗ್ಗದಿಂದ ಬಿಗಿದು ಕೊಲೆ ಮಾಡಿ ಆತನ ಶವವನ್ನು ಆತನ ಆಟೋದಲ್ಲಿಯೇ ಹಾಕಿಕೊಂಡು ಹೇಮಗಿರಿ ಗುಡ್ಡದ ಹತ್ತಿರ ಕರೆದುಕೊಂಡು ಹೋಗಿ ಅದರ ಪಕ್ಕದಲ್ಲಿರುವ ಕೆರೆಯ ಏರಿಯ ಮೇಲಿನಿಂದ ಪ್ರಕಾಶನ ಶವವನ್ನು ಕೆಳಗೆ ತಳ್ಳಿದ್ದಾಗಿ ನಂತರ ಆಟೋವನ್ನು ತೆಗೆದುಕೊಂಡು ಚಿಕ್ಕಮಗಳೂರಿಗೆ ಹೋಗಿದ್ದಾಗಿ 1 ನೇ ಆರೋಪಿ ನನ್ನ ಸಮಕ್ಷಮ ಪೊಲೀಸರಿಗೆ ತಿಳಿಸಿದನು ಎಂದು

ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಆಟೋದಲ್ಲಿ ಒಂದು ಏರೆಟೆಲ್ ಕಂಪೆನಿಗೆ ಸೇರಿದ ಸಿಮ್ ಕಾರ್ಡ್ 1 ನೇ ಆರೋಪಿಗೆ ಸಿಕ್ಕಿದ್ದಾಗಿ ಅದನ್ನು ತಾನು ಖರೀದಿಸಿದ್ದ ಸೆಕೆಂಡ್ ಹ್ಯಾಂಡ್ ವಿವೋ ಕಂಪೆನಿಗೆ ಸೇರಿದ ಮೊಬೈಲ್ ಗೆ ಹಾಕಿಕೊಂಡಿದ್ದಾಗಿ ನುಡಿದು ಆತ ತನ್ನ ಬಳಿ ಇದ್ದ ಸದರಿ ಮೊಬೈಲನ್ನು ಪೊಲೀಸರಿಗೆ ನಮ್ಮ ಸಮಕ್ಷಮ ಹಾಜರುಪಡಿಸಿರುತ್ತಾನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನಾನು ಸದರಿ ಮೊಬೈಲನ್ನು ನೋಡಿರುತ್ತೇನೆ, ಸದರಿ ಮೊಬೈಲ್ ಲಾಕ್ ಆಗಿದ್ದು ಅದನ್ನು 1 ನೇ ಆರೋಪಿಯ ಮೂಲಕ ಪೊಲೀಸರು ತೆಗೆಸಿ ಅದರಲ್ಲಿದ್ದ ಏರೆಟೆಲ್ ಕಂಪೆನಿಗೆ ಸೇರಿದ ಸಿಮ್ ಕಾರ್ಡನ್ನು ತೆಗೆದು ನಂತರ ಮೊಬೈಲನ್ನು ಏರೋಪ್ಲೇನ್ ಮೋಡಿಗೆ ಹಾಕಿ ಸದರಿ ಸಿಮ್ ಕಾರ್ಡ್ ಮತ್ತು ಮೊಬೈಲನ್ನು ಒಂದು ಕವರ್ ನಲ್ಲಿ ಹಾಕಿ ಪ್ಯಾಕ್ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡು ಪೊಲೀಸರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. 1 ನೇ ಆರೋಪಿ ತಾನು ಧರಿಸಿದ್ದ ಬಟ್ಟೆಗಳನ್ನು ಪೊಲೀಸರಿಗೆ ತೋರಿಸಿ ಅವುಗಳನ್ನು ತಾನು ದಿನಾಂಕ 14.07.2021 ರಂದು ಕೃತ್ಯವೆಸಗಿದ ಸಮಯದಲ್ಲಿ ಧರಿಸಿದ್ದಾಗಿ ನುಡಿದನು, ನಂತರ ಪೊಲೀಸರು ಆತನಿಗೆ ಧರಿಸಲು ಬೇರೆ ಬಟ್ಟೆಗಳನ್ನು ನೀಡಿ ಆತ ಧರಿಸಿದ್ದ ಬಟ್ಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

26. 1 ನೇ ಆರೋಪಿ ಹಾಜರುಪಡಿಸಿದ ಬಟ್ಟೆಗಳು ಒಂದು ಕೆಂಪು ಬಣ್ಣದ ತುಂಬು ತೋಳಿನ ಶರ್ಟಾಗಿತ್ತು, ಒಂದು ಕಡು ನೀಲಿ ಬಣ್ಣದ ಜರ್ಕಿನ್ ಆಗಿತ್ತು, ಸದರಿ ಶರ್ಟು ಮತ್ತು ಜರ್ಕಿನನ್ನು ಪೊಲೀಸರು ಪ್ರತ್ಯೇಕವಾಗಿ ಬಟ್ಟೆಯಲ್ಲಿ ಹಾಕಿ ಹೊಲೆದು ಪ್ಯಾಕ್ ಮಾಡಿಕೊಂಡು ಅವುಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡರು, ಆ ಬಗ್ಗೆ ಬೆಳಿಗ್ಗೆ 9.00 ಗಂಟೆಯಿಂದ 9.30 ಗಂಟೆಯವರೆಗೆ ಪೊಲೀಸರು ಪಂಚನಾಮೆಯನ್ನು ಜರುಗಿಸಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

27. ಮು.ಮಾ.10 ಮೊಬೈಲ್, ಮು.ಮಾ.11 ಶರ್ಟ್ ಮತ್ತು ಮು.ಮಾ.12 ಜರ್ಕಿನ್ ಅನ್ನು ಆ ದಿನ 1 ನೇ ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡಿದ್ದಾಗಿ,ಅವುಗಳ ಮೇಲೆ ನಿಮ್ಮ ಸಹಿಗಳಿರುವ ಚೀಟಿಗಳನ್ನು ಅಂಟಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ಪಿರ್ಯಾದುದಾರರು ನಿಮ್ಮ ಸಂಬಂಧಿಕರಾಗಿರುವ ಕಾರಣ ಆರೋಪಿತರಿಗೆ ಶಿಕ್ಷೆ ಕೊಡಿಸಲೇ ಬೇಕು ಎನ್ನುವ ಕಾರಣದಿಂದ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ